**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 248/2024**

| | | |
|---|---|---|
| ಸಾಕ್ಷಿದಾರರ ಹೆಸರು | : | ವಿಜಯಲಕ್ಷ್ಮಿ |
| ತಂದೆಯ ಹೆಸರು | : | ಮುತ್ತಯ್ಯ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಹುಲಿಕುರ ಗ್ರಾಮ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 16.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ**

ಚಾಸಾ-1 ನನ್ನ ತಂದೆ. ಚಾಸಾ-3, ಚಾಸಾ-4 ಮತ್ತು ಚಾಸಾ-7 ರವರ ಪರಿಚಯವಿರುವುದಿಲ್ಲ. ಚಾಸಾ-5 ಮತ್ತು ಚಾಸಾ-6 ರವರ ಪರಿಚಯವಿರುತ್ತದೆ. ಅವರು ನಮ್ಮ ಊರಿನವರು. ಆರೋಪಿಗಳ ಪರಿಚಯವಿರುತ್ತದೆ.

ದಾಸನಪುರ ಗ್ರಾಮದ ಸ.ನಂ. 10 ರಲ್ಲಿ ಒಟ್ಟು 04 ಎಕರೆ ಜಮೀನು ಇದ್ದು ಅದರಲ್ಲಿ 02 ಎಕರೆ ಜಮೀನು ನನ್ನ ತಂದೆಯ ಅಣ್ಣನಾದ 1 ನೇ ಆರೋಪಿಗೆ ಸೇರಿದ್ದು, ಉಳಿದ 02 ಎಕರೆ ಜಮೀನು ನಮಗೆ ಸೇರಿರುತ್ತದೆ. ದಿನಾಂಕಃ 13.05.2024 ರಂದು ಬೆಳಿಗ್ಗೆ ಸುಮಾರು 10.00 ಗಂಟೆ ಸಮಯದಲ್ಲಿ ನಾನು ಹಾಗು ನನ್ನ ತಂದೆಯಾದ ಚಾಸಾ-1 ರವರು ಸದರಿ ಜಮೀನಿನ ಬಳಿ ಹೋಗಿ ಅಲ್ಲಿ ಸುಮಾರು 01.00 ಗಂಟೆ ಹೊತ್ತು ಅಂದರೆ ಸುಮಾರು 11.00 ಗಂಟೆಯವರೆಗೆ ಗಿಡ-ಗಂಟಿಗಳನ್ನು ತೆಗೆದಿದ್ದು, ಸುಮಾರು 11.00 ಗಂಟೆ ಹೊತ್ತಿಗೆ 3 ನೇ ಆರೋಪಿ ನಾಗರಾಜುರವರು ಬಂದು ಅಲ್ಲಿ

ನಮ್ಮೊಂದಿಗೆ ಗಲಾಟೆ ಮಾಡಿ ಗಿಡ-ಗಂಟಿಗಳನ್ನು ತೆಗೆಯಬೇಡಿ ಎಂದು ಗಲಾಟೆ ಮಾಡಿ ನಂತರ ಅವರ ತಾಯಿಯಾದ 4 ನೇ ಆರೋಪಿಯನ್ನು ಕರೆದುಕೊಂಡು ಪುನಃ 12.00 ಗಂಟೆಯ ಹೊತ್ತಿಗೆ ಇಬ್ಬರೂ ಬಂದು ನಮ್ಮೊಂದಿಗೆ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಂತರ ಮಧ್ಯಾಹ್ನ ಸುಮಾರು 01.30 ಗಂಟೆಯ ಹೊತ್ತಿಗೆ 1 ನೇ ಆರೋಪಿ ಅಲ್ಲಿಗೆ ಬಂದು ನಮ್ಮೊಂದಿಗೆ ಗಲಾಟೆ ಮಾಡಿ ನಮಗೆ ಅವಾಚ್ಯ ಶಬ್ದಗಳಿಂದ ಬೈದು ಇಲ್ಲಿಂದ ಹೋಗದೇ ಇದ್ದರೆ ನಮ್ಮ ಮಗನಾದ ಜ್ಯೋತಿಕುಮಾರನನ್ನು ಕರೆಸಿ ನಿಮ್ಮ ತಿಥಿ ಮಾಡುತ್ತೇನೆಂದು ಬೆದರಿಕೆ ಹಾಕಿ ನಮ್ಮ ಅಪ್ಪನಾದ ಚಾಸಾ-1 ರವರ ಕುತ್ತಿಗೆ ಹಿಡಿದು ಎಳೆದು ಅವರು ಧರಿಸಿದ್ದ ಬನಿಯನ್ ಅನ್ನು ಹರಿದು ಹಾಕಿರುತ್ತಾರೆ. ನಂತರ ಮಧ್ಯಾಹ್ನ ಸುಮಾರು 02.30 ಗಂಟೆಗೆ ಆರೋಪಿಗಳೆಲ್ಲರೂ ಜೊತೆಯಾದ ಬಂದು ಮತ್ತೆ ನಮ್ಮೊಂದಿಗೆ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು, 1 ಮತ್ತು 3 ನೇ ಆರೋಪಿಗಳು ನನ್ನ ತಂದೆಯವರಾದ ಚಾಸಾ-1 ರವರನ್ನು ಹಿಡಿದುಕೊಂಡಿದ್ದು ಆಗ 2 ನೇ ಆರೋಪಿಯು ಮಚ್ಚಿನಿಂದ ನನ್ನ ತಂದೆಯ ಎಡಭಾಗಕ್ಕೆ ಹಲ್ಲೆ ಮಾಡಿರುತ್ತಾರೆ. ಆಗ ನಾನು ಅದನ್ನು ಮೊಬೈಲ್ ನಲ್ಲಿ ವೀಡಿಯೋ ಮಾಡಿಕೊಂಡು ಗಲಾಟೆ ಬಿಡಿಸಲು ಹೋಗಿದ್ದು ಆಗ 4 ನೇ ಆರೋಪಿ ನನ್ನ ಜುಟ್ಟನ್ನು ಹಿಡಿದುಕೊಂಡಿದ್ದು ಆರೋಪಿಗಳೆಲ್ಲರೂ ನನ್ನನ್ನು ಬಗ್ಗಿಸಿ ಹಲ್ಲೆ ಮಾಡಿರುತ್ತಾರೆ. ಸದರಿ ಹಲ್ಲೆಯಿಂದ ನನ್ನ ಎದೆಯ ಎಡಭಾಗದಲ್ಲಿ ಗಾಯವಾಗಿರುತ್ತದೆ. ಅಲ್ಲದೇ ನನ್ನ ಮೂಗು ಹಾಗು ಬಲಕೈಯ ಕಿರುಬೆರಳಿಗೂ ಗಾಯವಾಗಿರುತ್ತದೆ. ಅದೇ ಸಮಯದಲ್ಲಿ 1 ನೇ ಆರೋಪಿಯು ದೊಣ್ಣೆಯಿಂದ ನನ್ನ ತಂದೆಯ ಬಲಭಾಗದ ಹಣೆಗೆ ಹಲ್ಲೆ ಮಾಡಿರುತ್ತಾನೆ. ಆಗ ನನ್ನ ಅಪ್ಪ ಚಾಸಾ-1 ರವರು ಕಳೆಕ್ಕೆ ಬಿದ್ದು ಹೋಗಿರುತ್ತಾರೆ. ನಂತರ ಅಲ್ಲಿ ಸ್ಥಳೀಯರಾದ ಚಾಸಾ-5 ಮತ್ತು

ಚಾಸಾ-6 ರವರು ಬಂದು ಗಲಾಟೆ ಬಿಡಿಸಿರುತ್ತಾರೆ. ಆಗ ಆರೋಪಿಗಳು ಹೋಗುವಾಗ ನಿಮ್ಮನ್ನು ಯಾವುದೇ ಕಾರಣಕ್ಕೂ ಬಿಡುವುದಿಲ್ಲವೆಂದು ಜೀವ ಬೆದರಿಕೆ ಹಾಕಿ ಹೊರಟು ಹೋಗಿರುತ್ತಾರೆ. ನಂತರ ಸ್ಥಳೀಯರೊಬ್ಬರು ಬಂದಿದ್ದು ನಾನು ಹಾಗು ಅವರು ಸೇರಿ ನನ್ನ ಅಪ್ಪನಾದ ಚಾಸಾ-1 ರವರನ್ನು ಹೆಚ್.ಡಿ. ಕೋಟೆಯ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿರುತ್ತೇನೆ. ನಂತರ ಅದೇ ದಿನ ಸದರಿ ಆಸ್ಪತ್ರೆಗೆ ಪೋಲೀಸರು ಬಂದು ನನ್ನ ತಂದೆಯನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡು ಹೋಗಿರುತ್ತಾರೆ. ನಂತರ ಮರು ದಿನ ಪೋಲೀಸರು ಕೃತ್ಯ ಸ್ಥಳಕ್ಕೆ ಬಂದಿದ್ದು ಅಲ್ಲಿ ನಾನು ಪೋಲೀಸರಿಗೆ ಸ್ಥಳವನ್ನು ತೋರಿಸಿಕೊಟ್ಟು ಆರೋಪಿಗಳು ಕೃತ್ಯಕ್ಕೆ ಬಳಸಿದ ದೊಣ್ಣೆ ಹಾಗು ಮಚ್ಚನ್ನು ಹಾಗು ನನ್ನ ತಂದೆಯಾದ ಚಾಸಾ-1 ರವರು ಕೃತ್ಯದ ಸಮಯದಲ್ಲಿ ಧರಿಸಿದ್ದ ಬನಿಯನ್ ಅನ್ನು ಹಾಜರುಪಡಿಸಿದ್ದು ಪೋಲೀಸರೂ ಮಹಹರ್ ನಂತೆ ಅವುಳನ್ನು ವಶಪಡಿಸಿಕೊಂಡಿರುತ್ತಾರೆ. ಸದರಿ ಮಹಜರ್ ಅನಲುನ ಮಧ್ಯಾಹ್ನ ಸುಮಾರು 12.30-01.30 / 02.00 ಗಂಟೆಯವರೆಗೆ ಜರುಗಿಸಿರುತ್ತಾರೆ. ಸದರಿ ಮಹಜರ್ ಗೆ ನಾನು ಸಹ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ಮೇಲೆ ಹೇಳಿದಂತೆ ಪೋಲೀಸರು ಜರುಗಿಸಿದ ಮಹಜರ್ ಎಂದು ಗುರುತಿಸಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಮಹಜರ್ ಅನ್ನು ನಿ.ಪಿ.-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.-2(ಎ) ಎಂದು ಗುರುತಿಸಲಾಯಿತು.

- ಎಲ್ಲಾ ಸಂಗತಿಗಳ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆಯನ್ನು ಸಹ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆಮಾಲು-1 ರಿಂದ ಮುದ್ದೆಮಾಲು-3 ಅನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ನ್ಯಾಯಾಲಯದ

ಮುಂದಿರುವ 1 ರಿಂದ 4 ನೇ ಆರೋಪಿತರನ್ನು ನೋಡಿ ಗುರುತಿಸುತ್ತಾರೆ. 5 ನೇ ಆರೋಪಿ ಗೈರು ಹಾಜರಾಗಿದ್ದು, ಅವರ ಪರ ವಕೀಲರು ಹಾಜರಾತಿ ವಿನಾಯಿತಿಯ ಅರ್ಜಿಯನ್ನು ಸಲ್ಲಿಸಿದ್ದು 5 ನೇ ಆರೋಪಿಯ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಯಿತು.

***(ಈ ಹಂತದಲ್ಲಿ ಸ.ಸ.ಅ. ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಆರೋಪಿಗಳು ನನಗೆ ಹಲ್ಲೆ ಮಾಡಿದಾಗ ನನ್ನ ಬಲಗೈ ಹೆಬ್ಬೆರಳಿಗೆ ಗಾಯವಾಗಿರುತ್ತದೆಂದರೆ ಸರಿ. ಪೋಲೀಸರು ನಿ.ಪಿ.-2 ರಂತೆ ಮಹಜರ್ ಅನ್ನು ದಿನಾಂಕಃ 14.05.2024 ರಂದು ಸಂಜೆ ಸುಮಾರು 04.00-05.00 ಗಂಟೆಯವರೆಗೆ ಜರುಗಿಸಿರುತ್ತಾರೆಂದರೆ ಸರಿ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ. ಬಿ.ಎಲ್.ಟಿ. ವಕೀಲರಿಂದಃ**

ನಾನು ಎಂ.ಎ. ಬಿ.ಎಡ್ ವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಮದುವೆಯಾಗಿ ಈಗ 03 ತಿಂಗಳು ಆಗಿರುತ್ತದೆ. ನಾನು ಮದುವೆಯಾದ ಪೂರ್ವದಲ್ಲಿ ಹುಲಿಕುರ ಗ್ರಾಮದಲ್ಲಿ ವಾಸವಿದ್ದು ಮದುವೆಯ ನಂತರ ಈಗ ಕೊಳ್ಳೇಗಾಲದಲ್ಲಿ ವಾಸವಿರುತ್ತೇನೆ. ನಾನು ನನ್ನ ಪಿ.ಯು.ಸಿ. ಹಾಗು ಪದವಿಯನ್ನು ಮೈಸೂರಿನ ಮಹಾರಾಣಿ ಕಾಲೇನಿನಲ್ಲಿ ಹಾಗು ಎಂ.ಎ. ಯನ್ನು ಮೈಸೂರಿನ ಗಂಗೋತ್ರಿ ಕಾಲೇಜಿನಲ್ಲಿ ಹಾಗು ಬಿ.ಎಡ್. ಅನ್ನು ಮೈಸೂರಿನ ಅಗ್ರಹಾರ ಕಾಲೇನಿನಲ್ಲಿ ಮುಗಿಸಿರುತ್ತೇನೆ. ನಾನು ಆ ರೀತಿ ವಿದ್ಯಾಭ್ಯಾಸ ಮಾಡಿಕೊಂಡಿದ್ದರಿಂದ ನಾನು ಯಾವುದೇ ಜಮೀನಿನ ಕೆಲಸಕ್ಕೆ ಹೋಗುತ್ತಿರಲಿಲ್ಲ ಎಂದರೆ

ಸರಿ. ಸಾಕ್ಷಿ ಮುಂದುವರೆದು ಜಮೀನಿನ ಕೆಲಸವನ್ನು ನಮ್ಮ ತಂದೆಯೇ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆಗೆ ಹಾಗು 1 ನೇ ಆರೋಪಿಗೆ ಹೆಗ್ಗಡಾಪುರ ಹಾಗು ಹುಲಿಕುರ ಗ್ರಾಮದಲ್ಲಿ ಜಮೀನು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಹುಲಿಕುರದಲ್ಲಿರುವ ಜಮೀನು ಅಜ್ಜಿಯ ಭಾಗಕ್ಕೆ ಬಂದ ಜಮೀನು ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲೆ ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿರವುದಿಲ್ಲ, ನನ್ನ ತಂದೆಗೆ ಗೊತ್ತಿರುತ್ತದೆ. ದಾಸನಪುರ ಗ್ರಾಮದ ಸ.ನಂ. 10 ರ ಆಸ್ತಿಗೆ ಸಂಬಂಧಿಸಿದಂತೆ ನನ್ನ ತಂದೆ ಹೆಚ್.ಡಿ. ಕೋಟೆಯ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ: 208/2015 ರಂತೆ ದಾವೆ ಸಲ್ಲಿಸಿದ್ದು ಅದು 16.02.2024 ರಂದು ವಜಾ ಆಗಿರುತ್ತದೆಂದರೆ ಸರಿ. ನಮಗು ಹಾಗು ಆರೋಪಿಗಳಿಗು ಮೊದಲಿನಿಂದಲೂ ಜಮೀನಿನ ವಿಚಾರದಲ್ಲಿ ವೈಮನಸ್ಸು ಇರುತ್ತದೆಂದರೆ ಆ ಬಗ್ಗೆ ನನಗೆ ಗೊತ್ತರುವುದಿಲ್ಲ. ಆರೋಪಿಗಳು ನಮ್ಮ ವಿರುದ್ದವೂ ಸಹ ಪೋಲೀಸರಿಗೆ ದೂರನ್ನು ನೀಡಿದ್ದು ಸದರಿ ಪ್ರಕರಣದಲ್ಲಿ ನಾನು ಸಹ ಆರೋಪಿಯಾರಿದ್ದು ಆಗಿದ್ದು ಸದರಿ ಪ್ರಕರಣ ಸಂಹ್ಯೆ: 249/2024 ಇದೇ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇರುತ್ತದೆಂದರೆ ಸರಿ. ಹುಲಿಕುರದಿಂದ ದಾಸನಪುರಕ್ಕೆ ಸುಮಾರು 20-30 ಕಿ.ಮೀ. ಅಂತರ ಇರಬಹುದು. ಸದರಿ ಘಟನೆಯ ದಿನದಂದು ಜಮೀನಿನ ಬಳಿ ನಾನು ಹಾಗು ನನ್ನ ತಂದೆ ಚಾಸಾ-1 ರವರು ಹೋಗಿರುತ್ತೇವೆ. ಸದರಿ ದಿನದಂದು ನಾನು ಹಾಗು ನನ್ನ ತಂದೆ ಜಮೀನಿನ ಬಳಿ ಹೋಗಿಯೇ ಇರುವುದಿಲ್ಲ ಹಾಗು ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಯಾವುದೇ ಆರೋಪಿಗಳು ನನಗಾಗಲೀ ಅಥವಾ ನನ್ನ ತಂದೆಯಾದ ಚಾಸಾ-1 ರವರ ಜೊತೆ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿ ಕೊಲೆ ಬೆದರಿಕೆ

ಹಾಕಿರುವುದಿಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿ ಮೊದಲ ಬಾರಿ ಬಂದಾಗ ಅಲ್ಲಿ ನಾನು, ನನ್ನ ತಂದೆ ಹಾಗು 3 ನೇ ಆರೋಪಿ ಮಾತ್ರ ಇದ್ದಿರುತ್ತೇವೆ, ಆ ಸಮಯದಲ್ಲಿ ಪಕ್ಕದ ಜಮೀನಿನವರು ಯಾರು ಇದ್ದಿರಲಿಲ್ಲ. ಎರಡನೇ ಬಾರಿ 3 ನೇ ಆರೋಪಿಯು ಅವರು ತಾಯಿಯಾದ 4 ನೇ ಆರೋಪಿಯನ್ನು ಕರೆದುಕೊಂಡು ಬಂದಿರುತ್ತಾರೆ. ಆಗ ಅಕ್ಕ-ಪಕ್ಕದ ಜಮೀನಿನವರು ಇದ್ದಿರುತ್ತಾರೋ ಇಲ್ಲವೋ ನಾನು ಗಮನಿಸಿರುವುದಿಲ್ಲ. ಕೊನೆಗೆ ಅಂದರೆ ಮಧ್ಯಾಹ್ನ ಸುಮಾರು 02.30 ಗಂಟೆಯ ಹೊತ್ತಿಗೆ ಎಲ್ಲಾ ಆರೋಪಿಗಳು ಜೊತೆಯಲ್ಲಿ ಬಂದು ಗಲಾಟೆ ಮಾಡಿರುತ್ತಾರೆ. ಆರೋಪಿಗಳು ಮೊದಲ ಬಾರಿ ಅಥವಾ ಎರಡನೇ ಬಾರಿ ಬಂದ ಸಮಯದಲ್ಲಿ ನನ್ನ ತಂದೆ ಪೋಲೀಸರಿಗೆ ಯಾವುದೇ ದೂರನ್ನು ಕೊಡಲು ಹೋಗಿರುವುದಿಲ್ಲ. ಮಧ್ಯಾಹ್ನ 02.30 ರ ಹೊತ್ತಿಗೆ ಗಲಾಟೆ ನಡೆದಾಗ ಅಲ್ಲಿ ಅಕ್ಕ-ಪಕ್ಕದ ಜಮೀನಿನ ಸುಮಾರು 05-06 ಜನ ಇದ್ದಿದ್ದರು. ಅವರುಗಳಲ್ಲಿ ಚಾಸಾ-5 - ನಾಗನಾಯಕ ಹಾಗು ಚಾಸಾ-6 ಶಾಂತಮ್ಮನವರನ್ನು ಹೊರತುಪಡಿಸಿ ನನಗೆ ಬೇರೆ ಯಾರ ಹೆಸರು ಗೊತ್ತಿರುವುದಿಲ್ಲ. ಗಲಾಟೆ ನಡೆದಿತ್ತು ಎಂದು ಹೇಳಲಾದ ಸಮಯದಲ್ಲಿ ಆ ರೀತಿ ಯಾವುದೇ ಅಕ್ಕ-ಪಕ್ಕದ ಜಮೀನಿನವರು ಇದ್ದಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ನನ್ನ ತಂದೆಗೆ ಹಲ್ಲೆ ಮಾಡಿದಾಗ ರಕ್ತ ಬಂದಿದ್ದು, ಸದರಿ ರಕ್ತದ ಕಲೆ ನನ್ನ ತಂದೆ ಆ ಸಮಯದಲ್ಲಿ ಧರಿಸಿದ್ದ ಬನಿಯನ್ ಗೆ ತಾಗಿರುತ್ತದೆ. ಪೋಲೀಸರು ಸದರಿ ಬನಿಯನ್ ಅನ್ನು ವಶಪಡಿಸಿಕೊಂಡಾದ ಸದರಿ ಬನಿಯನ್ ನಲ್ಲಿ ರಕ್ತದ ಕಲೆ ಇರುವ ಜಾಗವನ್ನು ಗುರುತು ಮಾಡಿರುತ್ತಾರೆ. ಮುದ್ದೆಮಾಲು-1 ರಿಂದ ಮುದ್ದೆಮಾಲು-3 ಅನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿಸಿಕೊಂಡು ಪೋಲೀಸರಿಗೆ ಠಾಣೆಯಲ್ಲಿ ನೀಡಿರುತ್ತೇನೆಂದರೆ ಸರಿಯಲ್ಲ. ಸದರಿ ಮುದ್ದೆಮಾಲುಗಳ ಮೇಲೆ ಪೋಲೀಸರು ನನ್ನ ಸಹಿ

ಇರುವ ಚೀಟಿ ಅಂಟಿಸಿರುತ್ತಾರೆ. ಸದರಿ ಮಹಜರ್ ಬರೆಯುವ ಸಮಯದಲ್ಲಿ ನಾನು ಹಾಗು ಇನ್ನೊಬ್ಬ ಕುಮಾರ್ ಎನ್ನುವವರು ಇದ್ದಿರುತ್ತಾರೆ. ನಿ.ಪಿ.-2 ಮಹಜರ್ ಹಾಗು ಮುದ್ದೆಮಾಲು-1 ರಿಂದ ಮುದ್ದೆಮಾಲು-3 ಅನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿಸಿಕೊಂಡಿರುತ್ತೇವೆಂದರೆ ಸರಿಯಲ್ಲ. ಪೋಲೀಸರು ನನ್ನನ್ನು ನಾನು ನನ್ನ ತಂದೆಯ ಜೊತೆ ಆಸ್ಪತ್ರೆಯಲ್ಲಿರುವಾಗ ಹಾಗು ಮಹಜರ್ ಗೆ ಹೋದ ಸಮಯದಲ್ಲಿ ವಿಚಾರಣೆ ಮಾಡಿರುತ್ತಾರೆ. ಆ ನಂತರ ವಿಚಾರಣೆ ಮಾಡಿರುವುದಿಲ್ಲ. 4 ನೇ ಆರೋಪಿ ನನ್ನ ಜುಟ್ಟನ್ನು ಹಿಡಿದು ಎಳೆದ ಬಗ್ಗೆ ಪೋಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿರುತ್ತೇನೆ. ಆರೋಪಿಗಳು ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಯಾವುದೇ ಕೃತ್ಯವನ್ನು ಎಸಗದೇ ಇದ್ದಾಗ್ಯೂ ಸಹ ಆರೋಪಿಗಳಿಗು ಮತ್ತು ನಮಗು ಜಮೀನಿನ ಸಂಬಂಧ ಹಳೆಯ ವೈಷಮ್ಯವಿದ್ದು ಆ ಹಿನ್ನೆಲೆಯಲ್ಲಿ ನನ್ನ ತಂದೆ ಆರೋಪಿಗಳ ವಿರುದ್ಧ ಸುಳ್ಳು ದೂರನ್ನು ನೀಡಿದ್ದು ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**